INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -5, January-February, 2022,
PageNo,27-37
Peer Reviewed Journal, Referred Journal

# ಕನ್ನಡ ಸಾಹಿತ್ಯ ಲೋಕಕ್ಕೆ ದಲಿತ ಸಾಹಿತ್ಯ ಪರಿಷತ್ತಿನ ಕೊಡುಗೆಗಳು: ಒಂದು ಪರಿವೀಕ್ಷಣೆ

**ಪ್ರಮೀಳ .**[1]
**ಪ್ರೊ.ಜೆ.ಸೋಮಶೇಖರ್**[2]

ಭಾರತ ದೇಶದಲ್ಲಿನ ಸಮಗ್ರ ಸಾಹಿತ್ಯದ ನೆಲೆಗಳನ್ನು ತಳಸ್ಪರ್ಶಿಯಾಗಿ ಅವಲೋಕಿಸಿದಾಗ; ಶಿಷ್ಟ ಸಾಹಿತ್ಯವೇ ತನ್ನ ಸಾರ್ವಭೌಮತ್ವವನ್ನು ಮೇರೆದಿರುತ್ತದೆ. ಇಂತಹ ಸಾಹಿತ್ಯ ವ್ಯವಸ್ಥೆಯಲ್ಲಿಯೂ ದೇಶ ಮತ್ತು ಕರ್ನಾಟಕ ರಾಜ್ಯದಲ್ಲಿ ದಲಿತ ಸಾಹಿತ್ಯವು ತನ್ನದೇ ಆದ ಐತಿಹಾಸಿಕ ನೆಲೆ ಹಾಗೂ ಹಿನ್ನೆಲೆಯನ್ನು ಹೊಂದಿರುವುದನ್ನು ಕಾಣಬಹುದು. ಭಾರತೀಯ ಸಮಾಜವನ್ನು ಶೋಷಣೆ ಮುಕ್ತಗೊಳಸಲು ಶ್ರಮಿಸಿದವರಲ್ಲಿ ಬುದ್ಧ – ಬಸವ – ಬಾಬಾಸಾಹೇಬ್ ಅಂಬೇಡ್ಕರ್ ಅವರು ಬಹುಮುಖ್ಯವಾಗಿ ಕಂಡುಬರುವ ವ್ಯಕ್ತಿತ್ವಗಳು. ಇವರ ಚಿಂತನೆಯಾಧಾರಿತ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ದಲಿತ ಚಿಂತಕರು ಮತ್ತು ಬುದ್ಧಿಜೀವಿಗಳಿಂದಲೇ ಸಾಹಿತ್ಯವು ಉಗಮಗೊಂಡಿರುತ್ತದೆ. ಇಂತಹ ಸಾಹಿತ್ಯದ ಒಂದು ಸಾಂಸ್ಥಿಕ ರೂಪವೇ ಈ ಕರ್ನಾಟಕ ರಾಜ್ಯದ ದಲಿತ ಪರಿಷತ್ತು. ಇದು ಕರ್ನಾಟಕದಾದ್ಯಂತ ತಳ ಸಮುದಾಯದ ಏಳಿಗೆಗೆ, ಸರ್ವ ಸಮಾನತೆಯ ತತ್ವಗಳನ್ನು ಆಧರಿಸಿ ಹಲವು ಹತ್ತು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿರುವುದನ್ನು ಗುರುತಿಸಬಹುದು. ಇದರ ಜೊತೆ ಜೊತೆಗೆಯೇ ಈ ನಾಡಿನ ತಳ ಸಮುದಾಯದಲ್ಲಿ ಕಂಡುಬರುವ ಹಲವು ಹತ್ತು ಪ್ರತಿಭೆಗಳನ್ನು ಗುರುತಿಸುವಲ್ಲಿ ದಲಿತ ಸಾಹಿತ್ಯ ಪರಿಷತ್ತು ಪ್ರಮುಖ ಪಾತ್ರವಹಿಸುತ್ತದೆ. ಇದೇ ಅಲ್ಲದೆ ಸ್ಥಾನಮಾನ ಮತ್ತು ಅವಕಾಶವಂಚಿತರಿಗೆ ಸೂಕ್ತ ಸ್ಥಾನಮಾನಗಳನ್ನು ದೊರಕಿಸಿಕೊಡುವ ಮೂಲಕ 12ನೇ ಶತಮಾನದ ಸಮಾನತೆಯ ಪ್ರತಿಪಾದಕರಾಗಿದ್ದಂತಹ ಬಸವಣ್ಣ ಅವರ ನೇತೃತ್ವದ ಅನುಭವ ಮಂಟಪದ ರೀತಿಯಲ್ಲಿ ದಲಿತ ಮತ್ತು ದಲಿತೇತರ ಸಾಹಿತಿಗಳು ಹಾಗೂ ಬುದ್ಧಿಜೀವಿಗಳು ತಮ್ಮ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಲು ಒಂದು ಸೂಕ್ತ ವೇದಿಕೆಯನ್ನು ನಿರ್ಮಿಸಿಕೊಂಡರು. ಅದರಲ್ಲಿ

---

1. **ಸಂಶೋಧಕರು**, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಮಾನಸಗಂಗೋತ್ರಿ, ಮೈಸೂರು.
2 .**ಪ್ರಾಧ್ಯಾಪಕರು**, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಮಾನಸಗಂಗೋತ್ರಿ, ಮೈಸೂರು.

ಬಹುಮುಖ್ಯವಾಗಿಯೇ ತಳ ಸಮುದಾಯಗಳ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಿ, ಸಾಮಾಜಿಕ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ದಲಿತ ಸಾಹಿತ್ಯ ಪರಿಷತ್ತು ಸಮ್ಮೇಳನಗಳನ್ನು ಸಂಘಟಿಸುತ್ತಿದೆ. ಇದರ ಜೊತೆಗೆ ಸತ್ವಭರಿತ ವಿಚಾರ ವಿನಿಮಯ ಮಾಡುವುದಲ್ಲದೆ ದಲಿತ ಸಾಹಿತ್ಯ–ಸಂಸ್ಕೃತಿ ವಿಸ್ತರಣೆ, ಹಾಗೂ ತಳ ಸಮುದಾಯದ ಸಾಹಿತಿಗಳ ಪ್ರತಿಭೆಯನ್ನು ಗುರುತಿಸುವುದು, ದಲಿತರು – ದಲಿತೇತರರನ್ನು ಒಗ್ಗೂಡಿಸುವುದು, ಸಾಹಿತ್ಯದ ಮೂಲಕ ಶೋಷಣೆ ಮುಕ್ತಗೊಳಿಸುವುದು, ಜನಜಾಗೃತಿ ಮೂಡಿಸುವುದು, ಸಮಾನತೆ, ಸೋದರತ್ವದ ಮನೋಭಾವನೆಗಳನ್ನು ಬೆಳೆಸುವುದಾಗಿದೆ. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ತತ್ವವನ್ನು ಸಾರುವುದು ಇದರ ಬಹುಪ್ರಮುಖ ಉದ್ದೇಶವಾಗಿದೆ. ಇದೇ ಅಲ್ಲದೆ ಸಮಕಾಲಿನ ಸಂದರ್ಭದಲ್ಲಿ 'ಜಾತಿವ್ಯವಸ್ಥೆ'ಯಿಂದ ಸಂಭವಿಸುತ್ತಿರುವ ಅವಘಡಗಳನ್ನು ಅವಲೋಕಿಸಿ ಕಾನೂನು ಅರಿವು ಮೂಡಿಸುವ ಮಹತ್ತರವಾದಂತಹ ಕಾರ್ಯಕ್ರಮಗಳನ್ನು ಈ ದಲಿತ ಸಾಹಿತ್ಯ ಪರಿಷತ್ತು ಕೈಗೊಳ್ಳುತ್ತಿದೆ. ಹೀಗೆ ಎಲೆ ಮರೆ ಕಾಯಿಯಂತಿರುವ ದಲಿತ–ದಲಿತೇತರ ಪ್ರತಿಭೆಗಳನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದರ ಜೊತೆಗೆ, ತನ್ನ ಕಾರ್ಯ ವೈಖರಿಯನ್ನು ಪಸರಿಸುತ್ತಾ ಬಂದಿರುವುದನ್ನು ಪ್ರಸ್ತುತವಾಗಿ ತಿಳಿಯುವುದು ಬಹಳ ಮುಖ್ಯವಾಗಿದೆ.

**ಕರ್ನಾಟಕದಲ್ಲಿ ದಲಿತ ಸಾಹಿತ್ಯ ಪರಿಷತ್ತಿನ ಉಗಮ**

ದಲಿತ ಲೋಕದ ಪರಿಚಯಕ್ಕಾಗಿ ಎಲ್ಲ ಮಗ್ಗಲುಗಳ ಅನಾವರಣವಾಗಿ ಮತ್ತು ಬಹುಮುಖ್ಯವಾಗಿ ಅಂಬೇಡ್ಕರ್ ಅವರ ಪ್ರೇರಣೆ ಮತ್ತು ಆಗಾಧವಾದಂತಹ ಪ್ರಭಾವದಿಂದಲೇ ಕರ್ನಾಟಕದಲ್ಲಿ ಇಂದು ಅದೆಷ್ಟೋ ಸಂಘಟನೆಗಳು ಹುಟ್ಟಿಕೊಂಡರೂ ಕಡಿಮೆಯೇ ಎನ್ನಬೇಕು. ಕರ್ನಾಟಕದಲ್ಲಿ ದಲಿತ ಸಾಹಿತ್ಯ–ಸಂಘಟನೆಯ ಪರಿಸರ ಪ್ರಜ್ಞೆಯು ಆರಂಭವಾದದ್ದೇ ನಿಚ್ಚಳವಾಗಿ ಎಪ್ಪತ್ತರ ದಶಕದಲ್ಲಿ ಎನ್ನಬಹುದು. ಅಂದಿನ ದಿನಗಳಲ್ಲಿ ಸಮುದಾಯಗಳ ಸಂಘಟನೆ, ಸಾಹಿತ್ಯ ಬರೆಯುವವರು ಬೆರಳೆಣಿಕೆಯಷ್ಟು ಮಾತ್ರ. ಅದರಲ್ಲೂ ಕೆಲವರು ಚಳವಳಿಯಲ್ಲಿ ಧಿಕ್ಕಾರ ಕೂಗಲು, ಹಾಡು ಹೇಳಲು ಇದ್ದರು ಮತ್ತೆ ಕೆಲವರು ತಳಸಮುದಾಯದ ಪ್ರತಿಭೆಯ ಸಹೋದರರನ್ನು ಬಳಸಿಕೊಂಡು ಸಂಘಟಕರು, ಸಂಘಟನೆಗಳು ಬೆಳೆದವು. ಆದರೆ ಸಾಹಿತ್ಯ–ಸಾಂಸ್ಕೃತಿಕ ಕ್ಷೇತ್ರದ ಅವಕಾಶ ವಂಚಿತರಿಗಾಗಿ ಒಂದು ವೇದಿಕೆ ಇರಲಿಲ್ಲ. ಹಾಗಾಗಿ ಅದಕ್ಕಾಗೆಂದೇ ಸ್ಥಾಪನೆಗೊಂಡದ್ದು, ಈ ದಲಿತ ಸಾಹಿತ್ಯ ಪರಿಷತ್ತು ರಾಜ್ಯಘಟಕ, ಗದಗ ಎಂಬ ಈ ಸಂಸ್ಥೆಯು ರಾಜ್ಯದ ಮಧ್ಯಭಾಗದಲ್ಲಿ (ಹುಲಕೋಟಿ–ಗದಗ) ಆರಂಭವಾಗಿ ಮೂವತ್ತು ಜಿಲ್ಲಾ ಘಟಕಗಳನ್ನು ಸ್ಥಾಪಿಸಿ ನೂರಾರು ಕಾರ್ಯಕ್ರಮಗಳನ್ನು ರಾಜ್ಯದೆಲ್ಲೆಡೆ ಪಸರಿಸುತ್ತಾ, ಬೀದರ ಜಿಲ್ಲೆಯ ಬಾಲ್ಕಿ, ಔರಾದಗಳಿಂದ ಹಿಡಿದು ಚಾಮರಾಜನಗರ, ಮೈಸೂರು, ಕೋಲಾರ, ಬಳ್ಳಾರಿ ಹೀಗೆ ಗಡಿನಾಡಿನ ಉದ್ದಕ್ಕೂ ಸಂಚರಿಸಿ, ಗಡಿನಾಡಿನ ಭಾಗದ ಅಲ್ಲಲ್ಲಿ ಕಾರ್ಯಕ್ರಮಗಳು ನಡೆದಿರುವಂತಹದ್ದು ಕಾಣಬಹುದು. ಇದರ ಜೊತೆಯಲ್ಲಿ ದಲಿತ ಸಾಹಿತ್ಯ ಪರಿಷತ್ತು ಪ್ರಕಾಶನ ಸಂಸ್ಥೆಯೊಂದನ್ನು ಆರಂಭಿಸಿ 70ಕ್ಕೂ ಹೆಚ್ಚು

ಪುಸ್ತಕಗಳನ್ನು ಪ್ರಕಟಿಸಿರುವುದು ಬಹಳ ಪ್ರಮುಖವಾದಂಥ ಹಂತವಾಗಿದೆ. ಅಲ್ಲದೆ 'ಹಳೇ ಬೇರು, ಹೊಸ ಚಿಗುರು' ಎನ್ನುವಂತೆ ಯುವ ಸಮುದಾಯಕ್ಕೆ ಆದ್ಯತೆ ನೀಡಿ, ಹಳೇ ಸಾಹಿತಿಗಳ ನೆನೆಕೆಯಲ್ಲಿ ಡಾ. ಅರವಿಂದ ಮಾಲಗತ್ತಿ, ಡಾ.ಸತ್ಯಾನಂದ ಪಾತ್ರೋಟ, ಡಾ.ಮೂಡ್ನಾಕೂಡು ಚಿನ್ನಸ್ವಾಮಿ, ಪ್ರೊ.ಮಲ್ಲೇಪುರಂ, ಜಿ.ವೆಂಕಟೇಶ ಮೊದಲಾದವರ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ, ದಲಿತ ಸಾಹಿತ್ಯವು ಸಮೃದ್ಧಿಗೊಳ್ಳುವಂತೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಶೋಷಿತ ಸಮುದಾಯಗಳನ್ನು ಒಂದೇ ವೇದಿಕೆಯಡಿ ತಂದು ಎಂಟು ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಗಳನ್ನು ಅರ್ಥಪೂರ್ಣವಾಗಿ ಸಂಘಟಿಸಿರುವುದು ಸಾಹಿತ್ಯ ಪರಿಷತ್ತಿನ ಹೆಮ್ಮೆಯಾಗಿದೆ. ಅದಲ್ಲದೇ ಜಾತ್ಯಾತೀತವಾಗಿ ಪ್ರಗತಿಪರ ಲೇಖಕರು ಈ ಸಂಘಟನೆಯಲ್ಲಿ ಸಮ್ಮೇಳತಗೊಂಡಿರುವುದು ಬಹಳ ಮುಖ್ಯವಾದ ವಿಷಯವಾಗಿದೆ. ಸಮ್ಮೇಳನ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ 500ಕ್ಕೂ ಹೆಚ್ಚು ದಲಿತ ಸಾಹಿತಿಗಳು, ಕಲಾವಿದರು ಹಾಗೂ ಸಂಘಟಕರನ್ನು ಗುರುತಿಸಿ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಿರುವುದು ಕೂಡ ಮುಖ್ಯವಾದ ಅಂಶವಾಗಿದೆ. ಬುದ್ಧ-ಬಸವ-ಅಂಬೇಡ್ಕರ್ ಚಿಂತನೆಯನ್ನು ಆಧರಿಸಿದ ವಿನೂತನ ಕಾರ್ಯ್ಯಕ್ರಮಗಳನ್ನು ಸಂಘಟಿಸುತ್ತಾ ಬಂದಿರುವುದಲ್ಲದೆ ತಳ ಸಮುದಾಯಗಳ, ಶೋಷಿತ ಜನರ ಆಶಾದಾಯಕವಾಗಿ ಪರಿಷತ್ತಿನ ರಾಜ್ಯಾದ್ಯಕ್ಷರಾದ ಡಾ.ಅರ್ಜುನ ಗೊಳಸಂಗಿ ಅವರ ನೇತೃತ್ವದಲ್ಲಿ 1994 ರಲ್ಲಿ ಸ್ಥಾಪನೆಗೊಂಡ ಪರಿಷತ್ತು ಪ್ರಸಕ್ತ ಸಾಲಿನವರೆಗೆ ತನ್ನ ಪಟ್ಟು ಬಿಡದೆ ತನ್ನದೇ ಆದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ ಕನ್ನಡ ನಾಡು-ನುಡಿ ಸಾಹಿತ್ಯ ಸಂಸ್ಕೃತಿಯ ಸಮೃದ್ಧಿಗಾಗಿ ಅವಿರತವಾಗಿ ಶ್ರಮಿಸುತ್ತಿದೆ ಮತ್ತು ಈ ಪರಿಷತ್ತು ತಾಲ್ಲೂಕು ಮಟ್ಟದಲ್ಲಿ 20ಕ್ಕೂ ಹಾಗೂ ಜಿಲ್ಲಾ ಮಟ್ಟದಲ್ಲಿ 60ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಿರುವುದಲ್ಲದೆ ಹಾಗೂ ರಾಜ್ಯ ಮಟ್ಟದ ವಿಚಾರ ಸಂಕಿರಣಗಳು, ಕವಿಗೋಷ್ಠಿಗಳು, ಪುಸ್ತಕ ಬಿಡುಗಡೆ, ಕಾವ್ಯ-ಕುಂಚ-ಗಾಯನ ಪ್ರಸಾರ, ಡೊಳ್ಳುಕುಣಿತ, ಜನಪದ ಗಾಯನ, ಬುದ್ಧ-ಬಸವ-ಅಂಬೇಡ್ಕರ್ ಅವರಂಥ ಮಹನೀಯರನ್ನು ಕುರಿತ ಹಲವು ಹತ್ತು ರಾಜ್ಯಮಟ್ಟದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ವಿಚಾರಧಾರೆಯನ್ನು ಇಡೀ ರಾಜ್ಯ ವ್ಯಾಪಿ ಪಸರಿಸುತ್ತಾ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ.

**ದಲಿತ ಸಾಹಿತ್ಯ ಪರಿಷತ್ತಿನ ಸಾಧನೆಯ ಮೈಲುಗಲ್ಲು**

ದಲಿತ ಸಾಹಿತ್ಯ ಪರಿಷತ್ತಿನ ಕಾರ್ಯವೈಖರಿಯನ್ನು ಅವಲೋಕಿಸಿದಾಗ; ದಲಿತ ಸಾಹಿತ್ಯ-ಸಂಸ್ಕೃತಿ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆಯ ಹಾಗೂ ಅಭಿವೃದ್ಧಿಯ ಉದ್ದೇಶವಿಟ್ಟುಕೊಂಡು ರೂಪುಗೊಂಡ ಸಂಸ್ಥೆ ಇದಾಗಿದೆ. ಹಾಗೂ ಕರ್ನಾಟಕದ ಎಲ್ಲೆಡೆ ಹಲವಾರು ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ, ಗದಗದಲ್ಲಿ ಪ್ರಕಾಶನವೊಂದನ್ನು ಆರಂಭಿಸಿ ಇದುವರೆಗೆ 60ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟ ಮಾಡಿರುವುದು ಹೆಮ್ಮೆಯ ಪ್ರತೀಕವಾಗಿದೆ. ದಲಿತ

ಸಾಹಿತ್ಯ ಪರಿಷತ್ತು 2008-2018ರ ಮಾಹಿತಿಯ ಪ್ರಕಾರ ಹಲವಾರು ರೀತಿಯ ಪ್ರಶಸ್ತಿ ಪುರಸ್ಕಾರಗಳನ್ನು ನೀಡುತ್ತಾ ಬಂದಿದೆ. ಅದರಲ್ಲಿ ಮುಖ್ಯವಾಗಿ ಪುಸ್ತಕ ಪ್ರಶಸ್ತಿ (76 ಮಂದಿಗೆ ನೀಡಿದೆ) ಅಂಬೇಡ್ಕರ್ ಪ್ರಶಸ್ತಿ, ದಲಿತ ಸಿರಿ ಪ್ರಶಸ್ತಿ (3 ಮಂದಿಗೆ), ಗೌರವ ಪ್ರಶಸ್ತಿ- (15 ಮಂದಿಗೆ), ಬ್ರಹದ್ದೇಶಿ ಪ್ರಶಸ್ತಿ- (5-ಮಂದಿಗೆ), ದಲಿತ ಚೇತನ ಪ್ರಶಸ್ತಿ- (5 ಮಂದಿಗೆ), ದಲಿತ ಕಲಾಸಿರಿ ಪ್ರಶಸ್ತಿ- (3 ಮಂದಿಗೆ), ಸಾವಿತ್ರಿ ಬಾಯಿಫುಲೆ ಪ್ರಶಸ್ತಿ- (3 ಮಂದಿಗೆ), ಯುವ ಸಾಹಿತ್ಯ ಪ್ರಶಸ್ತಿ- (13 ಮಂದಿಗೆ). ಹೀಗೆ ಹಲವು ಬಗೆಯ ಪ್ರಶಸ್ತಿಗಳನ್ನು, ಸಾಧಕರಿಗೆ ನೀಡಿ ಗೌರವಿಸಿರುವುದು ದಲಿತ ಸಾಹಿತ್ಯ ಪರಿಷತ್ತಿನ ಪ್ರಸಂಶನೀಯವಾದ ಕೆಲಸವಾಗಿದೆ.

ದಲಿತ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ 2007-08 ರಲ್ಲಿ ನಡೆದ 'ದಲಿತ ಸಾಹಿತ್ಯ ಪರಿಷತ್ತು ದಶಮಾನ ಸಂಭ್ರಮ'ದ ಗೌರವ ಪ್ರಶಸ್ತಿಯ ಸಮಾರಂಭದಲ್ಲಿ ಮೈಸೂರು ವಿ.ವಿಯ ಕನ್ನಡ ಪ್ರಾಧ್ಯಾಪಕ ಡಾ.ಅರವಿಂದ ಮಾಲಗತ್ತಿ ನಾಡೋಜ ಜನಕವಿ ಡಾ.ಸಿದ್ಧಲಿಂಗಯ್ಯ, ಬೆಳಗಾವಿಯ ಜನಪರ ಚಿಂತಕ ಎಸ್.ಎಸ್.ಹಿರೇಮಠ, ಹಾಗೂ ಮೈಸೂರಿನ ಸಾಹಿತಿ ಮುಳ್ಳೂರು ನಾಗರಾಜ ಅವರಿಗೆ ಗೌರವ ಪ್ರಶಸ್ತಿ ಪ್ರಧಾನ ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಇದೇ ಸಂದರ್ಭದಲ್ಲಿ ವಿವಿಧ ಪ್ರಕಾರದ 11 ಪ್ರಸಿದ್ಧ ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಿರುವುದನ್ನು ಕಾಣಬಹುದಾಗಿದೆ. ಅವುಗಳೆಂದರೆ; 'ಚೈತ್ರದ ಬೆನ್ನುಹತ್ತಿ' ಕಾವ್ಯ ಕೃತಿಯನ್ನು ಎನ್.ಕೆ.ಹನುಮಂತಯ್ಯ, 'ಅನ್ನ' ಕಥಾಸಂಕಲನವನ್ನು ಹನೂರು ಚನ್ನಪ್ಪ, 'ಮಾದಾರ ಚೆನ್ನಯ್ಯ' ನಾಟಕವನ್ನು ನಂಜುಂಡಸ್ವಾಮಿ, 'ಅರಳವ್ವ' ಕಾದಂಬರಿಯನ್ನು ಡಾ.ಹೆಬ್ಬಾಲೆ ನಾಗೇಶ, 'ಬಿ.ಕೃಷ್ಣಪ್ಪ' ಜೀವನ ಚರಿತ್ರೆಯನ್ನು ಉಮಾದೇವಿ ಪಾಟೀಲ, 'ಮಣೆಗಾರ' ಆತ್ಮಕತೆಯನ್ನು ತುಂಬಾಡಿ ರಾಮಯ್ಯ, 'ಪುಟ್ಟಾವ ಬೆಳ್ಳಿಕಿರಣ'ದ ವಿಮರ್ಶಕ ಡಾ. ಅಪ್ಪಗೆರೆ ಸೋಮಶೇಖರ, 'ದಲಿತ ಸಾಂಸ್ಕೃತಿಕ ಲೋಕ'ಸಂಶೋಧನ ಗ್ರಂಥವನ್ನು ಡಾ.ಶಿವರಾಮು ಅಸುಂಡಿ, 'ಅಂಬೇಡ್ಕರ ಒಂದು ಮರುವ್ಯಾಖ್ಯಾನ'ವನ್ನು ಡಾ. ಕೆ.ವೆಂಕಟೇಶ, 'ದಲಿತ ಲೋಕದ ನೋವು-ನಲಿವು' ಲೇಖಕ ಡಾ. ಜೆ.ಸೋಮಣ್ಣ ಮತ್ತು 'ಅಗ್ನಿ ಕಿರೀಟ' ಕೃತಿಯನ್ನು ಶಿವಕುಮಾರ ಕಂಪ್ಲಿ. ಹೀಗೆ, ಇಲ್ಲಿ ನಮೂದಿಸಿರುವ ಹಲವು ಮೌಲಿಕ ಕೃತಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಿರುವುದು ಸಾಹಿತ್ಯ ಲೋಕದಲ್ಲಿ ಒಂದು ಹೆಮ್ಮೆಯ ಸಂಗತಿಯಾಗಿದೆ. ಜೊತೆಗೆ ಈ ದಶಮಾನ ಸಂಭ್ರಮದ ನೆನಪಿನ ಕಾರ್ಯಕ್ರಮದಲ್ಲಿ ದಲಿತ ಸಾಹಿತ್ಯ ಪರಿಷತ್ತು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಹಮ್ಮಿಕೊಂಡಿದ್ದ ಕೆಲವು ಪೂರ್ವಪರ ಯೋಜನೆಗಳನ್ನು ಹಾಕಿಕೊಂಡಿದ್ದುದು ಈ ಮುಂದಿನಂತೆಯೆ ತಿಳಿಯಬಹುದಾಗಿದೆ. ಅದೆನೆಂದರೆ; ದಲಿತ ಸಾಹಿತ್ಯ ಲೋಕದ ಇಬ್ಬರು ದಿಗ್ಗಜರಿಗೆ ಗೌರವ ಪ್ರಶಸ್ತಿ, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 10 ಜನರಿಗೆ ದಶಮಾನ ಪ್ರಶಸ್ತಿ, ದಲಿತ ಸಾಹಿತ್ಯ ಪುಸ್ತಕಗಳಿಗೆ ಪ್ರಶಸ್ತಿ, ದಶಮಾನ ಸಂಭ್ರಮ ನೆನಪಿಗಾಗಿ 10 ಪುಸ್ತಕಗಳ ಪ್ರಕಟಣೆ, ದಲಿತ ಸಾಹಿತ್ಯ ಚರಿತ್ರೆಯ 5 ಸಂಪುಟಗಳ ಪ್ರಕಟಣೆ, 'ದಲಿತ ಮಾರ್ಗ' ಸಾಹಿತ್ಯಿಕ ಹಾಗೂ ತ್ರೈಮಾಸಿಕ ಪತ್ರಿಕೆ ಆರಂಭ,

ಎರಡನೇಯ ತಲೆಮಾರಿನ ದಲಿತ ಲೇಖಕರ ವಿಚಾರ ಹಾಗೂ 'ದಲಿತ ಸಂಸ್ಕೃತಿ' ಶಿಬಿರಗಳನ್ನು ಏರ್ಪಡಿಸುವುದು, 'ದಲಿತೋದಯ' ಸ್ಮರಣ ಸಂಚಿಕೆ. ಇದರ ಜೊತೆಗೆ ದಲಿತ ಸಾಹಿತ್ಯ ಪರಿಷತ್ತು ಸತ್ವಭರಿತ ವಿಚಾರಗಳನ್ನು ಕುರಿತು ಹತ್ತು ಹಲವು ಪ್ರಮುಖ ಗೋಷ್ಠಿಗಳನ್ನು ಪ್ರಸಾರ ಮಾಡುವ ಮೂಲಕ ಪ್ರಮುಖ ವಿಚಾರಧಾರೆಗಳನ್ನು ಪ್ರಸ್ತುತ ಪಡಿಸುತ್ತಾ ಬಂದಿರುವುದನ್ನು ಗುರುತಿಸಬಹುದಾಗಿದೆ. ಅವುಗಳು ಅವುಗಳೆಂದರೆ; ದಲಿತ ಸಾಹಿತ್ಯ ಸಂಸ್ಕೃತಿ, ದಲಿತರು ಮತ್ತು ಜಾಗತೀಕರಣ, ದಲಿತ ಮಹಿಳಾ ಸಾಹಿತ್ಯ ಮತ್ತು ಸಂಘಟನೆ, ಮೀಸಲಾತಿ ಮತ್ತು ಮತಾಂತರ ಚಿಂತನೆ, ದಲಿತ ಸಾಹಿತ್ಯ ಸಂಪದ, ದಲಿತರ ಮುಂದಿರುವ ಜ್ವಲಂತ ಸಮಸ್ಯೆಗಳೇ ಆಗಿರುತ್ತವೆ ಎಂದು ಹೇಳಬಹುದು. ಇವುಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ದಲಿತ ಸಾಹಿತ್ಯ ಸಂಸ್ಕೃತಿ**: ದಲಿತ ಸಾಹಿತ್ಯ, ದಲಿತರ ನೋವು ಮತ್ತು ಆತಂಕದ ಜಗತ್ತನ್ನು ಕಲಾತ್ಮಕವಾಗಿ ಚಿತ್ರಿಸುವ ಮೂಲಕ ದಲಿತ ಮತ್ತು ದಲಿತೇತರರ ನಡುವಿನ ಮಾನಸಿಕ ಅಂತರವನ್ನು ದೂರ ಮಾಡಿ ದಲಿತೇತರರರನ್ನು ದಲಿತ ಚಿಂತಕರನ್ನಾಗಿಸುತ್ತದೆ. ಜೊತೆಗೆ ಇವರ ನಡುವಿನ ಸೋದರತ್ವ ಮನೋಭಾವ ಬೆಳೆದು ಶೋಷಣೆ ಮುಕ್ತ ಸಮಾಜವನ್ನಾಗಿ ಮಾಡಲು ಸಹಕಾರಿಯಾಗುತ್ತದೆ.

**ದಲಿತರು ಮತ್ತು ಜಾಗತೀಕರಣ**: ಭಾರತ ದೇಶದಲ್ಲಿ ಪುರೋಹಿತಶಾಹಿ ಪರೋಕ್ಷವಾಗಿ ಜಾಗತೀಕರಣದ ಹೆಸರಿನಲ್ಲಿ ಸವಾರಿ ಮಾಡಲು ಹವಣಿಸುತ್ತಿರುವುದನ್ನು ಕಾಣಬಹುದಾಗಿದೆ. ಆದರೆ ಜಾಗತೀಕರಣದಿಂದ ದಲಿತರಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚು ಗೋಚರವಾಗುತ್ತಿರುವಾಗ ದಲಿತರ ಶಕ್ತಿಯನ್ನು ಮತ್ತು ಜಾಗತೀಕರಣವನ್ನು ಬಳಸಿಕೊಂಡು ಬದಲಾವಣೆಗೆ ಮುನ್ನುಡಿ ಬರೆಯಬೇಕೆಂಬ ಅಗತ್ಯತೆಯನ್ನು ತಿಳಸುತ್ತದೆ.

**ದಲಿತ ಮಹಿಳಾ ಸಾಹಿತ್ಯ ಮತ್ತು ಸಂಘಟನೆ** ಎಂಬ ವಿಚಾರವನ್ನು ಕುರಿತು ಮಂಡಿಸಿದ ಸಂಡೂರು ಸ್ನಾತಕೋತ್ತರ ಕೇಂದ್ರದ ಕನ್ನಡ ಪ್ರಾಧ್ಯಾಪಕರಾದ ಡಾ.ಮಲ್ಲಿಕಾ ಘಂಟಿ ಅವರ ಪ್ರಕಾರ 'ಮಹಿಳೆ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಮೊದಲೇ ಶೋಷಿತಳು, ದಲಿತ ಮಹಿಳೆಯ ಶೋಷಣೆ ಇನ್ನಷ್ಟೂ ಕ್ರೂರ' ಎಂಬ ಅಭಿಪ್ರಾಯಕ್ಕೆ ಧ್ವನಿಗೂಡಿಸಿದವರು ಡಾ.ಅನುಸೂಯ ಕಾಂಬಳೆ ಹಾಗೂ ಡಾ.ಅಮೃತಾ ಕಟಕೆಯವರು. ಇದರ ಜೊತೆಗೆಯೇ ರಾಧಾಬಾಯಿ ಕೊಕಟನೂರ ಅವರ ಚೌಡಕಿ ಹಾಡು, ನಾಟಕ, ಕಥೆ, ಕವನಗಳು ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜನಜಾಗೃತಿ ಮೂಡಿಸುವುದು ಈ ದಲಿತ ಸಾಹಿತ್ಯ ಪರಿಷತ್ತಿನ ಧ್ಯೇಯ ಎಂಬುದನ್ನು ತಿಳಸುತ್ತದೆ. ಆದ್ದರಿಂದ ದಲಿತ ಮಹಿಳೆಯರು ಪ್ರಸ್ತುತವಾಗಿ ಸಂಘಟಿಸುವುದರ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯ. ಪ್ರಸ್ತುತವಾಗಿ ದಲಿತ ಮಹಿಳಾ ಲೇಖಕಿಯರ ಕೊರತೆಯು ಕಂಡು ಬಂದಿರುವುದರಿಂದ ಅವರ ಬರವಣಿಗೆಯು ಹೆಚ್ಚು ಹೆಚ್ಚು ಬರಬೇಕು ಎಂಬುದು ಪ್ರಮುಖ ಆಶಯವಾಗಿದೆ.

**ಮೀಸಲಾತಿ ಮತ್ತು ಮತಾಂತರ ಚಿಂತನೆ**: ಅಸ್ಪೃಶ್ಯರು ಮತ್ತು ತುಳಿತಕ್ಕೆ ಒಳಗಾದವರಿಗೆ ಮಾತ್ರ ಮೀಸಲಾತಿ ಇರಬೇಕು ಎಂಬ ನಿಯಮವಿದೆ. ಆದರೆ ಮತ ರಾಜಕಾರಣದಿಂದ ಇತರ ಜಾತಿಗಳನ್ನು ಸೇರಿಸಿ ವಂಚನೆ ಮಾಡಿರುವುದನ್ನು ಕಾಣಬಹುದಾಗಿದೆ. ಆದರೆ ಮೀಸಲಾತಿಯಲ್ಲಿ ಒಡಕು ಮೂಡಿಸದೆ ಅದರ ಬಗ್ಗೆ ಪರಿಪೂರ್ಣತೆಯ ಅರಿವು ಅಗತ್ಯವಾಗಿದೆ. ಜಾತಿವ್ಯವಸ್ಥೆಯು ಎಲ್ಲಿಯವರೆಗೆ ಬೇರೂರಿರುವುದೋ ಅಲ್ಲಿಯವರೆಗೆ ಮೀಸಲಾತಿ ಸ್ಥಿರಸ್ಥಾಯಿಯಾಗಿರುತ್ತದೆ. ಮಾನವೀಯ ಮೌಲ್ಯದ ಕಡೆಗೆ ಮತಾಂತರ ಗೊಂಡರೆ ಮಾತ್ರ 'ಮನುಜ ಮತ ವಿಶ್ವಪಥ' ತತ್ವದ ಕಡೆಗೆ ಸಾಗಲು ಸಾಧ್ಯ ಎಂಬುದನ್ನು ತಿಳಿಸುತ್ತದೆ.

**ದಲಿತ ಸಾಹಿತ್ಯ ಸಂಪದ**: ದಲಿತ ಸಾಹಿತ್ಯ ಸಂಪದ ಎಂಬ ವಿಚಾರವನ್ನು ಕುರಿತು ಕುವೆಂಪು ವಿಶ್ವವಿದ್ಯಾನಿಲಯ, ಕನ್ನಡ ಪ್ರವಾಚಕ ಡಾ.ರಂಗರಾಜ ವನದುರ್ಗ ಅವರ ಪ್ರಕಾರ 'ದಲಿತ ಸಾಹಿತ್ಯ ಯಾವ ಕಾರಣವಾಗಿ ಜನಿಸಿದೆಯೋ ಆ ಕಾರಣವಾಗಿ ಪ್ರಬಲಗೊಂಡು ಬರೆಯುವವರಿಗೆ ಶಕ್ತಿ ತುಂಬಿದೆ' ಎಂದಿದ್ದಾರೆ. ಅಲ್ಲದೆ ದಲಿತ ಕಾದಂಬರಿಗಳ ಬಗೆಗೆ ಮಾತನಾಡಿದಂತಹ ಡಾ.ಎನ್.ಬಿ.ಪವಾರ ಅವರು ದಲಿತ ಸಾಹಿತಿಗಳೊಂದಿಗೆ ದಲಿತೇತರರ ಶೂದ್ರಪ್ರಜ್ಞೆ ಹಾಗೂ ದಲಿತ ಪ್ರಜ್ಞೆಗೆ ಸಾಕ್ಷಿಯಾದ ಚೋಮನದುಡಿ, ಕಾನೂರು ಹೆಗ್ಗಡತಿ ಮೊದಲಾದ ಕೃತಿಗಳ ಬಗೆಗೆ ಪರಾಮರ್ಶಿಸಿರುವುದನ್ನು ಕಾಣಬಹುದು. ಹಾಗೆಯೇ ದಲಿತ ನಾಟಕಗಳ ಕುರಿತು ಡಾ.ಟಿ.ಎಂ.ಭಾಸ್ಕರ್, ಆತ್ಮಕತೆ ಕುರಿತು ನಿಂಗಪ್ಪ ಮುದೇನೂರ, ಸಂಪಾದನೆ ಕುರಿತು ಡಾ.ವಾಯ್. ಬಿ. ಹಿಮ್ಮಡಿ ಮೊದಲಾದ ತಜ್ಞರು ಮಾತನಾಡಿರುವುದನ್ನು ಗುರುತಿಸಬಹುದಾಗಿರುತ್ತದೆ. ಇದರ ಜೊತೆಗೆ ದಲಿತ ಸಾಹಿತ್ಯವು ದಲಿತ ಸಮುದಾಯಗಳ ಬದುಕನ್ನು ವಿಸ್ತೃತವಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಒಟ್ಟಾರೆಯಾಗಿ ದಲಿತ ಸಾಹಿತ್ಯವನ್ನು ಅವಲೋಕಿಸಿದಾಗ ನಾಟಕ, ಕಥೆ, ಕಾವ್ಯ, ಮಹಾಕಾವ್ಯ, ಆತ್ಮಚರಿತ್ರೆ, ಕಾದಂಬರಿಗಳಲ್ಲಿ ಅದೆಷ್ಟೋ ದೌರ್ಜನ್ಯದ ವಿಚಾರಗಳು ಹುದುಗಿವೆ. ಅಂತೆಯೇ ದಲಿತ ಸಾಹಿತ್ಯವು ದಲಿತರ ಸಮಸ್ಯೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ನಮ್ಮ ದೇಶಕ್ಕೆ ಸಂವಿಧಾನವೆಂಬ ರಕ್ಷಾ ಕವಚವಿದ್ದರೂ ಜಾತೀಯತೆಯ ಜಾಡ್ಯ ಬಿಡದೆ ಬೆಂಬತ್ತಿ ಕಾಡುತ್ತಿರುವುದು ವಿಷಾಧನೀಯ ಸಂಗತಿಯಾಗಿದೆ. ಇದಕ್ಕೆ ಉದಾಹರಣೆಯಾಗಿ ಕೊಪ್ಪಳ ಜಿಲ್ಲೆಯ ಹನುಮಸಾಗರ ಬಳಿ ನಡೆದ ಅಮಾನವೀಯ ಘಟನೆಯಾದ ದಲಿತರ ಮಗು ದೇಗುಲ ಪ್ರವೇಶ ಮಾಡಿದ್ದಕ್ಕೆ ಹೆತ್ತವರಿಗೆ 25 ಸಾವಿರ ದಂಡ ವಿಧಿಸಿರುವುದೇ ಸಾಕ್ಷಿಯಾಗಿದೆ. ಇಂತಹ ಘನಘೋರ ಸ್ಥಿತಿ–ಗತಿಗಳನ್ನು ಅನಾವರಣಗೊಳಿಸಲು ದಲಿತ ಸಾಹಿತ್ಯ ಸಂಪದವು ಸಹಕಾರಿಯಾಗಿದೆ.

**ದಲಿತರ ಮುಂದಿರುವ ಜ್ವಲಂತ ಸಮಸ್ಯೆಗಳು** ಎಂಬ ಈ ವಿಚಾರವನ್ನು ಕುರಿತು ನಡೆದ ಗೋಷ್ಠಿಯಲ್ಲಿ ಹಂಪಿ ವಿಶ್ವವಿದ್ಯಾನಿಲಯ, ಕನ್ನಡ ಪ್ರವಾಚಕ ಡಾ.ಬಿ.ಎಂ.ಪುಟ್ಟಯ್ಯ ಅವರು ಮಾತನಾಡಿ 'ದಲಿತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಹುಡುಕುವ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ. ಈ ಬಗೆಗೆ

ಆಳವಾದ ಅಧ್ಯಯನ ನಡೆದಿಲ್ಲ. ದಲಿತರು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ದಲಿತರ ಸಮಸ್ಯೆಗಳನ್ನು ಬೇರು ಸಹಿತ ಕಿತ್ತು ಹಾಕುವ ಕೆಲಸ ನಡೆಯಬೇಕು' ಎಂದು ಮಹತ್ವದ ವಿಚಾರವನ್ನು ತಿಳಿಸಿದರು. ಆದರೆ ದಲಿತರ ಪ್ರಸ್ತುತ ಸಮಸ್ಯೆಗಳನ್ನು ದಲಿತರು ಮತ್ತು ದಲಿತೇತರರು ಒಗ್ಗೂಡಿ ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಹಾಗೂ ಜಾತಿವ್ಯವಸ್ಥೆಯನ್ನು ಪಾಲನೆ ಪೋಷಣೆ ಮಾಡುವ ರೋಗಗ್ರಸ್ತ ಮನಸ್ಸುಗಳ ಪರಿವರ್ತನೆಯಿಂದ ಮಾತ್ರ ಸಾಧ್ಯ ಎಂಬುದು ಪ್ರಸ್ತುತವಾಗಿ ಪರಿಹಾರ ಮಾರ್ಗವಾಗಿದೆ.

ಹೀಗೆ ದಲಿತ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ವಿವಿಧ ಗೋಷ್ಠಿಗಳಲ್ಲಿ ಈ ಮೇಲ್ಕಂಡ ಸಮಸ್ಯೆಗಳ ಬಗೆಗೆ ಮುಕ್ತ ಸಂವಾದ ಹಾಗೂ ಉಪನ್ಯಾಸ ಕಾರ್ಯಕ್ರಮಗಳು ನಡೆದಿರುವುದನ್ನು ಕಾಣಬಹುದಾಗಿದೆ. ಇದೇ ಅಲ್ಲದೆ ವಿನೂತನ ವಿಷಯಗಳನ್ನು ಆಧರಿಸಿ ಸಮ್ಮೇಳನದಲ್ಲಿ ಚರ್ಚಿಸಿರುವುದು ಹಾಗೂ ಮಾರ್ಗದರ್ಶನ ನೀಡಿರುವುದನ್ನು ಕೂಡ ಕಾಣಬಹುದಾಗಿದೆ. ಜೊತೆಗೆ ಸಾಹಿತ್ಯ ಸಂಸ್ಕೃತಿ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 40ಕ್ಕೂ ಹೆಚ್ಚು ಗಣ್ಯರಿಗೆ ಸನ್ಮಾನ ಸಮಾರಂಭವನ್ನು ಕೈಗೊಂಡು ಸಾಧನೆಯ ಗುರಿಯತ್ತಾ ಹೆಜ್ಜೆ ಹಾಕಿರುವುದನ್ನು ಕಾಣಬಹುದಾಗಿರುತ್ತದೆ. ಹೀಗೆ ದಲಿತ ಸಾಹಿತ್ಯ ಪರಿಷತ್ತು ತನ್ನ ಕಾರ್ಯಕ್ರಮದ ಉದ್ದಕೂ ಜನ ಮಾನಸದಲ್ಲಿ ಉಳಿಯುವಂತೆ ಮಾಡಿ, ದಲಿತ ಸಾಹಿತಿಗಳು ಮತ್ತು ಬುದ್ಧಿಜೀವಿಗಳು ಸಾಮಾಜಿಕ ಪ್ರಜ್ಞೆ ಎಚ್ಚರಿಸುವ ಕೆಲಸವನ್ನು ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ಸಮ್ಮೇಳನದಲ್ಲಿ ದಲಿತ ಸಾಹಿತ್ಯ, ಸಂಸ್ಕೃತಿ ಚಿಂತಕರು, ಸಂಘಟಕರು, ಕಲಾವಿದರು, ಅಭಿಮಾನಿಗಳು, ಆಸಕ್ತರು ನೂರಾರು ಜನ ಪಾಲ್ಗೊಂಡು 'ಸಮತಾಭಾರತ' ಚಿಂತನೆಯನ್ನು ಒಳಗೊಂಡ ಸಮ್ಮೇಳನವು ಯಶಸ್ವಿಯಾಗಲು ಕಾರಣವಾಯಿತು. ಹೀಗೆ ದಲಿತ ಸಾಹಿತ್ಯ ಪರಿಷತ್ತು ಸಮ್ಮೇಳನಗಳನ್ನು ಆಯೋಜನೆ ಮಾಡಿ ನೂರಾರು ಜನರನ್ನು, ಲೇಖಕರನ್ನು, ಕಲೆಗಾರರನ್ನು ಒಗ್ಗೂಡಿಸಿ ಜ್ವಲಂತ ಸಮಸ್ಯೆಗಳ ಬಗೆಗೆ ಚರ್ಚೆಮಾಡಲು ವೇದಿಕೆ ನಿರ್ಮಾಣ ಮಾಡಿಕೊಟ್ಟು ಏಕತೆಗೆ ಕೈಗನ್ನಡಿಯಾಯಿತು. ಅಲ್ಲದೆ ಪುಸ್ತಕ ಪ್ರಕಾಶನವೊಂದನ್ನು ಗದಗದಲ್ಲಿ ಸ್ಥಾಪಿಸಿ, ಇದರಿಂದ ಅನೇಕರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಂಡು ಜೀವನ ನಡೆಸಲೂ ಸಹಕಾರಿಯಾಗಿದೆ.

ದಲಿತ ಸಾಹಿತ್ಯ ಪರಿಷತ್ತಿನ ಪ್ರಮುಖವಾದ ಧ್ಯೇಯವೆಂದರೆ, ದಲಿತ ಸಮುದಾಯದ ಒಡಕು, ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ರಾಷ್ಟ್ರೀಯ ಮಟ್ಟದಲ್ಲಿ ಒಮ್ಮತದ ನಿರ್ಧಾರ ಕೈಗೊಳ್ಳುವಷ್ಟರ ಮಟ್ಟಿಗೆ ಒಂದಾಗಬೇಕು. ಆಗ ಮಾತ್ರ ಪರಿವರ್ತನೆ ಹಾಗೂ ಬೆಳವಣಿಗೆಯು ಸಾಧ್ಯವಿದೆ. ಅದೇ ರೀತಿಯಲ್ಲಿ ಇನ್ನೂ ಜೀವಂತವಿರುವ ಜಾತಿ ವ್ಯವಸ್ಥೆಯನ್ನು ಬುಡಸಮೇತ ಕಿತ್ತೊಗೆಯಲು ಲೇಖನಿಯೆಂಬ ಖಡ್ಗದಿಂದ ಮಾತ್ರ ಸಾಧ್ಯ. ಆದರೆ ಯಾವ ಸರ್ಕಾರ ಜಾತಿವ್ಯವಸ್ಥೆ, ಅಸಮಾನತೆಯನ್ನು ಪಾಲನೆ ಮಾಡುತ್ತದೋ ಅಂತಹ ಸರ್ಕಾರದ ವಿರುದ್ಧ ಧ್ವನಿ ಎತ್ತುವ ಕೆಲಸ ದಲಿತ ಸಾಹಿತಿಗಳಗಿರಬೇಕಾಗಿರುತ್ತದೆ.

ದಲಿತ ಸಾಹಿತ್ಯ ಪರಿಷತ್ತು ಶಿಸ್ತು ಬದ್ಧ ಯೋಜನೆಗಳನ್ನು ಆಯೋಜಿಸಿ ಹಲವಾರು ಲೇಖಕರು, ಕಲಾವಿದರು, ವಿದ್ವಾಂಸರು, ಫಲಾನುಭವಿಗಳಾಗುವಂತೆ ಮಾಡಿ ಪ್ರೋತ್ಸಾಹಿಸುವಂತಹ ಕೆಲಸಗಳನ್ನು ಮಾಡುತ್ತಾ ಬಂದಿವೆ. ಇದೇ ಮಾದರಿಯಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಹಾಗೂ ಸಮ್ಮೇಳನಗಳನ್ನು ಆಯೋಜಿಸಿ ಡಾ.ಬಿ.ಆರ್.ಅಂಬೇಡ್ಕರ್‌ರಂತೆ ನಿಸ್ವಾರ್ಥ ಸೇವೆಗಳನ್ನು ಮಾಡುತ್ತಾ, ಸ್ವಾಭಿಮಾನ ಮತ್ತು ಸ್ವಾಯತ್ತತೆಯಿಂದ ತನ್ನ ಕಾರ್ಯ ವ್ಯಾಪ್ತಿಯನ್ನು, ಕರ್ನಾಟಕದಾದ್ಯಂತ ವಿಸ್ತರಿಸುತ್ತಾ, ಪ್ರಸ್ತುತವಾಗಿ 2021ರ ಸಾಲಿನಲ್ಲಿ 25 ವರ್ಷಗಳನ್ನು ಪೂರೈಸಿ, ನವಯುವತಿಯಂತೆ ಕಂಗೊಳಿಸಿ, ಪ್ರಸ್ತುತವಾಗಿ 'ಬೆಳ್ಳಿಹಬ್ಬ'ವನ್ನು ಆಚರಿಸಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ದಲಿತ ಸಾಹಿತ್ಯ ಪರಿಷತ್ತು ತನ್ನ ಅಸ್ತಿತ್ವವನ್ನು ರೂಪಿಸಿಕೊಂಡು ಉತ್ತಮ ಮಾದರಿಯ ಕೆಲಸಗಳನ್ನು ಮಾಡುತ್ತಾ 'ಏನಾದರು ಆಗು ಮೊದಲು ಮಾನವನಾಗು' ಎಂಬ ತಾತ್ವಿಕ ಚಿಂತನೆಯ ಅಡಿಯಲ್ಲಿ ಕುವೆಂಪುರವರ ವಿಶ್ವ ಮಾನವ ಸಂದೇಶವನ್ನು ಸಾರುತ್ತಾ, ಸಮಾಜಮುಖಿ ಚಿಂತನೆಯನ್ನು ವಿಸ್ತರಿಸುವ ಪ್ರಯತ್ನವು ಹಾಗೂ ಮಾನವೀಯ ಮೌಲ್ಯವನ್ನು ಎತ್ತಿಹಿಡಿಯುವ ಧ್ಯೇಯವನ್ನು ಹೊಂದಿದೆ. ಅದೇ ರೀತಿಯಲ್ಲಿ ಕನಕದಾಸರ ಕೀರ್ತನೆಯನ್ನು ಪ್ರತಿಪಾದಿಸುತ್ತಾ... 'ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ! ಬಲ್ಲಿರಾ!" ಎಂಬ ತತ್ವವನ್ನು ಆಧರಿಸಿ ಕುಲದ ಪರಿಕಲ್ಪನೆಯ ಹೆಸರಲ್ಲಿ ಜೀವ ಜೀವಗಳ ನಡುವಿನ ಘರ್ಷಣೆಯನ್ನು ತೊರೆದು ಸಮಾನತೆ ಗುರಿಯತ್ತ ಸಾಗಲು ದಲಿತ ಸಮುದಾಯಗಳ ಸಮಾನ ಅವಕಾಶಗಳನ್ನು ದೊರಕಿಸಿಕೊಡಲು ದಲಿತ ಸಾಹಿತ್ಯ ಪರಿಷತ್ತು ಸಾಕಷ್ಟು ಕಾರ್ಯಕ್ರಮಗಳನ್ನು ಆಯೋಜಿಸಿ ಪ್ರಚುರಪಡಿಸಿರುವುದನ್ನು ಕಾಣಬಹುದಾಗಿದೆ.

ಇದೇ ಮಾದರಿಯಲ್ಲಿ ಸಾಹಿತ್ಯ ಸಂಸ್ಕೃತಿ, ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಾನವನ ಶ್ರೇಯೋಭಿವೃದ್ಧಿಯನ್ನು ಬೆಂಬಲಿಸಿ ಕರ್ನಾಟಕದಲ್ಲಿ ಉದಯಿಸಿರುವ ಜನಪದ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದ ಪರಿಷತ್ತುಗಳಂತೆ ದಲಿತ ಸಾಹಿತ್ಯ ಪರಿಷತ್ತು ಕೂಡ ದಲಿತ ಸಮಾಜದ ಏಳಿಗೆಯನ್ನು ಬಯಸಿ ಉದಯಿಸಿತು. ಇದು ಬೃಹತ್ ಆಲದ ಮರದಂತೆ ಬೆಳೆದು ಚಿಗರೊಡೆದು ಕಾರ್ಯನಿರ್ವಹಣೆಯನ್ನು ಮಾಡುತ್ತಾ ತಾತ್ವಿಕ ಸ್ವರೂಪವನ್ನು ಪಡೆದುಕೊಂಡಿದೆ. ಅಲ್ಲದೆ ಸಮಾಜ ಕಟ್ಟುವ ಧ್ಯೇಯ ದಲಿತ ಸಾಹಿತಿಗಳಗಿರಬೇಕು. ಎಂಬ ಸಂದೇಶವನ್ನು ನೀಡಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಅಲ್ಲದೆ ದಲಿತ-ದಲಿತೇತರರು ಸಂಘರ್ಷಗಳ ಕೂಪವಾಗದೆ ಅದರ ಬದಲಿಗೆ ಪ್ರೀತಿ-ಪ್ರೇಮ-ಸೌಹಾರ್ದತೆಯ ಮೈತ್ರಿ ಮನೋಭಾವನೆಯ ನೆಲೆಯಲ್ಲಿ ಭಾರತೀಯ ಸಮ-ಸಮಾಜದ ನಿರ್ಮಾತೃ ಆಗಬೇಕೆಂಬ ನಿರ್ದೇಶನವನ್ನು ನೀಡುತ್ತಾ ಬಂದಿದೆ.

ಭಾರತೀಯ ಸಮಾಜದ ಬಹುದೊಡ್ಡ ಸಂಶೋಧಕರಾದ ಬುದ್ಧ ಮಹಾಗುರುವಿನ ಪ್ರಜ್ಞೆ, ಕರುಣೆ, ಸಮಾನತೆಯ ಅಡಿಯಲ್ಲಿ ಜ್ಞಾನ ಮತ್ತು ಧ್ಯಾನಶೀಲರಾಗಬೇಕು ಎಂಬ ಸಮಾನ ಧರ್ಮವನ್ನು ಬೋಧಿಸಿದ ತಾತ್ವಿಕ ಚಿಂತನೆಯನ್ನು ಆಧರಿಸಿ ಜ್ಞಾನದ ಪರಿಕಲ್ಪನೆಯನ್ನು ನೀಡಿದರು. ಅದೇ ರೀತಿಯಲ್ಲಿ 'ಜ್ಞಾನದ ಬಲದಿಂದ ಅಜ್ಞಾನದ ಕೇಡುನೋಡಯ್ಯ' ಎಂದು ವಚನದ ಮೂಲಕ ಸಮಾನತೆಯತ್ತ ಸಾಗಿದ ಬಸವಣ್ಣ ಅವರ ಆದಿಯಾಗಿ ಅರಿವಿನ ಸಮಾಜವು ಉದಯಿಸಬೇಕು. ಹಾಗೂ ವೈದಿಕಶಾಹಿಯ ಮೌಢ್ಯತೆ, ಜಾತೀಯತೆ, ಅಸಮಾನತೆ ಹಾಗೂ ಬಂಡವಾಳಶಾಹಿಯ ಶ್ರೇಣೀಕರಣ ವ್ಯವಸ್ಥೆಯ ಕೂಪವನ್ನು ಬೇಧಿಸಿ ಶಿಕ್ಷಣವೆಂಬ ಅಸ್ತ್ರವನ್ನು ಹಿಡಿದು ಸಾಮಾಜಿಕ ಸಮಸ್ಯೆಗಳನ್ನು ಅಂತ್ಯಗೊಳಿಸಬೇಕು ಎಂಬುದು ಅಂಬೇಡ್ಕರ್ ಅವರ ಬಹುದೊಡ್ಡ ನಿಲುವಾಗಿತ್ತು. ಅಲ್ಲದೆ ದಲಿತರು ರಾಜಕೀಯವಾಗಿ ಅಧಿಕಾರ ಚುಕ್ಕಾಣಿ ಹಿಡಿದು ಸಮಾನತೆ, ಸ್ವಾತಂತ್ರ್ಯ, ಸೋದರತ್ವ ಪರಿಕಲ್ಪನೆಯಲ್ಲಿ ಸಾಗುವುದು ಅಲ್ಲದೆ ಈ ತತ್ವ ಚಿಂತಕರೋಪಾದಿಯಲ್ಲಿ ದಲಿತ ಸಾಹಿತ್ಯ ಪರಿಷತ್ತು ಕಾರ್ಯನಿರ್ವಹಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಪರಿಷತ್ತಿನ ಕಾರ್ಯವೈಖರಿಯನ್ನು ತಿಳಿಯಲು ಸಾಕ್ಷಿಯಾಗಿ, ನಿಮ್ನವರ್ಗಗಳಿಗೆ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದ್ದ 'ನಮ್ಮ ನಡಿಗೆ ಕೇರಿಯ ಕಡೆಗೆ' ಎಂಬ ವಿನೂತನ ಕಾರ್ಯಕ್ರಮವೇ ಸೂಕ್ತ ನಿದರ್ಶನವಾಗಿದೆ.

ಸಮಾಜದಲ್ಲಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಭರಾಟೆಯಲ್ಲಿ ಬಡವರ ಬದುಕು ಬೀದಿ ಪಾಲಾಗುತ್ತಿರುವಾಗ, ಬಡವ-ಶ್ರೀಮಂತರ ನಡುವಿನ ಅಂತರ ಹೆಚ್ಚಾಗುತ್ತಿರುವಾಗ, ಸಾಮಾಜಿಕ ನ್ಯಾಯಕ್ಕೆ ಹಿನ್ನೆಡೆಯು ಉಂಟಾಗಿರುವುದನ್ನು ಕಾಣಬಹುದು. ಇದರ ಬಗೆಗೆ ಧ್ವನಿ ಎತ್ತುವ ಕೆಲಸವನ್ನು ದಲಿತ ಸಾಹಿತ್ಯವು ಮಾಡುತ್ತದೆ. ಇದಕ್ಕೆ ನಿದರ್ಶನವಾಗಿ ದಲಿತ ಸಾಹಿತ್ಯ ಅಸಹಾಯಕತೆ ವೇದನೆಯನ್ನು ಅನಾವರಣವಾಗಿ ಮರಾಠಿ ಲೇಖಕ ಶರಣಕುಮಾರ್ ಲಿಂಬಾಳೆ ಅವರ ಆತ್ಮಕಥೆಯಲ್ಲಿನ ಒಂದು ತುಣುಕನ್ನು ಇಲ್ಲಿ ನಿರೂಪಿಸಲಾಗಿದೆ. ತನ್ನ ಪ್ರೇಮವನ್ನು ಬಚ್ಚಿಟ್ಟು ಕೊಂಡ ತರುಣನೊಬ್ಬ ಹೊಳೆಯಲ್ಲಿ ಈಜುತ್ತಿದ್ದಾಗ ಆತ ಪ್ರೀತಿಯನ್ನು ವ್ಯಕ್ತ ಮಾಡಲು ಅವಳ ಮೇಲೆ ಬೊಗಸೆಯಿಂದ ನೀರನ್ನು ಎರಚುತ್ತಾನೆ. ಅವಳು ತೊಯ್ದು ಹೋಗುತ್ತಾಳೆ. ತರುಣನಿಗೆ ಅವಳ ಮನಸ್ಸಿನ ಇಂಗಿತವನ್ನು ತಿಳಿಯುವ ಆಸೆ. ಆದರೆ ಬಾಲೆ ಕೋಪಗೊಳ್ಳುತ್ತಾಳೆ. ತರುಣನ ಮುಖದಲ್ಲಿ ನಿರಾಸೆ ಮೂಡುತ್ತದೆ. ಅವಳಿಂದ ತಾನು ತಿರಸ್ಕೃತನಾದನೆಂದು ಭಾವಿಸುವಷ್ಟರಲ್ಲಿ ಅವಳು "ತನಗಿರುವುದು ಒಂದೇ ಜೊತೆ ಬಟ್ಟೆ, ಈಗ ಅದೂ ತೊಯ್ದು ಹೋಗಿದೆ. ನಾನೇನು ಮಾಡಲಿ?" ಎನ್ನುತ್ತಾಳೆ. ಈ ಪ್ರಸಂಗವು ದಲಿತನ ಪ್ರೀತಿಯ ಪಾಲಿಗೆ ಹೇಗೆ ಅಸಹಾಯಕನನ್ನಾಗಿಸುತ್ತದೆ ಎಂಬುದಕ್ಕೆ ಉದಾಹರಣೆಯಾಗಿದೆ. ಈ ರೀತಿಯಲ್ಲಿ ದಲಿತ ಸಾಹಿತ್ಯವು ಸಮಾನತೆಯನ್ನು ಬಯಸಿ ಪ್ರತಿಭಟನೆಯತ್ತ ವಾಲುವುದು ಅನಿವಾರ್ಯ ಹಾಗೂ ಅಗತ್ಯತೆಯನ್ನು ಸೃಷ್ಟಿಸುತ್ತದೆ.

ಹೀಗೆ ದಲಿತ ಸಾಹಿತ್ಯವು ಸಮಾಜಮುಖಿಯಾಗಿ, ದಲಿತ ಸಮುದಾಯದ ಆಶಾದಾಯಕವಾಗಿ ದಲಿತರ ನೋವಿಗೆ ಸಾಂತ್ವನ ಹೇಳುವ ಸಾಹಿತ್ಯ ಪ್ರಸರಣಕ್ಕೆ ವೇದಿಕೆಯಾಗಿದೆ. ಸಮಾಜದಲ್ಲಿ ಇನ್ನೂ ಜೀವಂತಿಕೆ ಪಡೆದಿರುವ ಜಾತಿವ್ಯವಸ್ಥೆ, ದಲಿತರ ಮೇಲಿನ ದೌರ್ಜನ್ಯ, ಮಹಿಳೆಯರ ಅತ್ಯಾಚಾರ, ಮೀಸಲಾತಿಯಲ್ಲಿನ ಒಡಕು, ಕೂಲಿಕಾರ್ಮಿಕರ, ರೈತರ, ವೃದ್ಧರ, ಮಕ್ಕಳ ಮೇಲಿನ ದೌರ್ಜನ್ಯ ಇತ್ಯಾದಿ ಸಾಮಾಜಿಕ ಸಮಸ್ಯೆಗಳನ್ನು ಗಣಿಸಿ, ಕಾರಣ ಮತ್ತು ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ದಲಿತ ಸಾಹಿತ್ಯವು ಕೇಂದ್ರೀಕರಣಗೊಂಡಿದೆ. ಅಲ್ಲದೆ ದಲಿತ ಸಾಹಿತಿಗಳ ಬರವಣಿಗೆಯ ಮೂಲಕ ದಲಿತರ ದೌರ್ಜನ್ಯಗಳನ್ನು ಬಹಿರಂಗ ಪಡಿಸಿ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಹಾಗೂ ದಲಿತ ಸಾಹಿತಿಗಳ ಸಾಮಾಜಿಕ ಜವಾಬ್ಧಾರಿಯನ್ನು ಜಾಗೃತಗೊಳಸುತ್ತಾ, ದಲಿತ ಸಾಹಿತ್ಯ ಪರಿಷತ್ತು ಇಂತಹ ಸಾಹಿತ್ಯ ಪ್ರಸರಣದ ಪ್ರೇರಕ ಶಕ್ತಿಯಾಗಿ ರೂಪುಗೊಂಡಿದೆ. ತಳ ಸಮುದಾಯದ ಹೆಚ್ಚು ಜನರು ಸಂಶೋಧನೆ ಕ್ಷೇತ್ರಕ್ಕೆ ದುಮುಕುತ್ತಿರುವ ಈ ಹೊತ್ತಿನಲ್ಲಿಯೇ ದಲಿತರ ಸಂಶೋಧನೆಗಳಲ್ಲಿ 'ಸತ್ವವಿಲ್ಲ' ಎಂಬ ಮಾತು ಕೇಳಿ ಬರುತ್ತಿದೆ. ಆದರೆ ಅದನ್ನು ಬದಿಗೊತ್ತಿ ದಲಿತ ಸಾಹಿತ್ಯವನ್ನು 'ಊಟದಲ್ಲಿನ ಕರಿಬೇವಿನಂತೆ' ಬಳಸುತ್ತಿದ್ದಾರೆ. ನಿಮ್ಮನ್ನು ನೀವೆ ಅವಮಾನ ಮಾಡಿಕೊಳ್ಳಬಾರದು, ಪ್ರಶ್ನಿಸುವ, ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಹೀಗೆ ದಲಿತ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಮಹತ್ತರ ಕೊಡುಗೆ ನೀಡಿರುವುದನ್ನು ಕಾಣಬಹುದಾಗಿದೆ.

**ಉಪಸಂಹಾರ**

ಬುದ್ಧ ಬಸವ ಅಂಬೇಡ್ಕರ್ ಅವರಂತಹ ಮಹನೀಯರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ತಳಸಮುದಾಯದ ಏಳಿಗೆ ಹಾಗೂ ಸರ್ವಸಮಾನತೆಯ ತತ್ವಗಳನ್ನು ಆಧರಿಸಿ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಅವಿರತವಾಗಿ ಸಾಮಾಜಿಕ ಸೇವೆಯನ್ನು ಮಾಡುತ್ತಾ ಬಂದಿರುತ್ತದೆ. ಜೊತೆಗೆ ಜನಜಾಗೃತಿ, ದಲಿತ ಸಾಹಿತಿಗಳ ಬಹುಮುಖ್ಯ ಧ್ಯೇಯವೇನು, ಸಾಹಿತ್ಯದ ಮೂಲಕ ಶೋಷಣೆಯನ್ನು ಬಯಲಿಗೆಳೆಯುವುದು, ಪ್ರಜಾಪ್ರಭುತ್ವದ ಮಹತ್ವ, ನಾಡು ನುಡಿ ಸಂಸ್ಕೃತಿಯ ಬೆಳವಣಿಗೆಗಾಗಿ ದಲಿತ ಸಾಹಿತ್ಯ ಪರಿಷತ್ತು ಸತತವಾಗಿ ದುಡಿಯಲು ಸದಾ ಸಿದ್ಧವಿದೆ. ಇದಕ್ಕಾಗಿ ಸರ್ಕಾರವು ಸೂಕ್ತ ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾಮಾಜಿಕ ಸಮಸ್ಯೆಗಳ ಬಗೆಗೆ ಚರ್ಚಿಸುತ್ತಾ ದಲಿತ ಸಾಹಿತ್ಯ-ಸಂಸ್ಕೃತಿ ವಿಸ್ತರಣೆಗೆ ಮನ್ನಣೆ ದೊರೆತಂಥಾಗುತ್ತದೆ. ಅಲ್ಲದೆ ಸಮಾನತೆ ಮತ್ತು ಸೋದರತ್ವದ ಮನೋಭಾವಗಳನ್ನು ಹೊಂದಿರುವ ದಲಿತ ಸಾಹಿತ್ಯ ಪರಿಷತ್ತು 12ನೇ ಶತಮಾನದಲ್ಲಿ ಜನಿಸಿದ ಸಮ ಸಮಾಜದ ನಿರ್ಮಾತೃವಾದ ಬಸವಣ್ಣ ಅವರ ನೇತೃತ್ವದ 'ಅನುಭವ ಮಂಟಪದ' ರೀತಿಯಲ್ಲಿ ಕಾರ್ಯಪ್ರವೃತ್ತಿಯನ್ನು ಹೊಂದಿರುತ್ತದೆ. ಅದೇ ರೀತಿಯಲ್ಲಿ 'ನನ್ನ ಕಿಸೆ ಬೇರೆ ಅಲ್ಲ ಪರಿಷತ್ತಿನ ಕಿಸೆ

ಬೇರೆಯಲ್ಲ' ಎಂಬ ಹೃದಯ ವೈಶಾಲ್ಯತೆಯನ್ನು ಹೊಂದಿರುವ ಕವಿ, ಲೇಖಕರು ಸಾಂಸ್ಕೃತಿಕ ಚಿಂತಕರು ಹಲವು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ.ಅರ್ಜುನ್ ಗೊಳಸಂಗಿ ಅವರ ನೇತೃತ್ವದಲ್ಲಿ ದಲಿತ ಸಾಹಿತ್ಯ ಪರಿಷತ್ತು ಪ್ರಸ್ತುತವಾಗಿ ಇಪ್ಪತ್ತೈದನೆಯ ಬೆಳ್ಳಿಹಬ್ಬವನ್ನು ಆಚರಿಸಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಅಲ್ಲದೆ ಸರ್ಕಾರದ ಆರ್ಥಿಕ ನೆರವು ಸಿಕ್ಕರೆ ಇನ್ನೂ ಹೆಚ್ಚಿನ ಪ್ರಬಲತೆಯನ್ನು ಪಡೆದುಕೊಳ್ಳುತ್ತದೆ. ಎಂಬ ಸಲಹೆಯನ್ನು ನೀಡುತ್ತಾ 'ಕಾಯಕವೇ ಕೈಲಾಸ' ಎಂಬ ನಾಣ್ಣುಡಿಯಂತೆ ಶಿಸ್ತುಬದ್ಧವಾದ ಕಾರ್ಯಕ್ರಮಗಳನ್ನು ನಡೆಸುವ ಸಂಸ್ಥೆ ಇದಾಗಿದ್ದು, ಇದರೊಡನೆ ಎಲ್ಲಾ ದಲಿತ ಬಾಂಧವರು, ದಲಿತೇತರ ಬಾಂಧವರು ಸದಸ್ಯತ್ವ ಪಡೆದುಕೊಳ್ಳುವುದರ ಮೂಲಕ ದಲಿತ ಸಾಹಿತ್ಯ ಪರಿಷತ್ತನ್ನು ಇನ್ನು ಹೆಚ್ಚು ಬಲಪಡಿಸುವ ಅಗತ್ಯವಿದೆ ಎಂಬುದು ಪ್ರಸ್ತುತ ಲೇಖನದ ಆಶಯವಾಗಿದೆ.

## ಪರಾಮರ್ಶನ ಗ್ರಂಥಗಳು


1. **ದಲಿತ ಪ್ರಭೆ**–ಡಾ.ಅರ್ಜುನ ಗೊಳಸಂಗಿ, ದಲಿತ ಸಾಹಿತ್ಯ ಪರಿಷತ್ತು,ರಾಜ್ಯ ಘಟಕ,ಗದಗ-2015
2. **25ನೇ ಬೆಳ್ಳಿಹಬ್ಬ ಕೈಪಿಡಿ** – ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗ-2021
3. **ಡಾ.ಸಿದ್ಧಲಿಂಗಯ್ಯ –'ಅಧ್ಯಕ್ಷೀಯ ಭಾಷಣ ಕೈಪಿಡಿ'** ದಲಿತ ಸಾಹಿತ್ಯ ಪರಿಷತ್ತು-25 ಮತ್ತು 26ನೇ ಅಕ್ಟೋಬರ್-2008, ವಿಜಾಪುರ.
4. **ಕನ್ನಡ ಪ್ರಭಾ ದಿನಪತ್ರಿಕೆ** – ಮೇ 21, 2012
5. **ಪ್ರಜಾವಾಣಿ ದಿನಪತ್ರಿಕೆ -** ಹುಬ್ಬಳ್ಳಿ-ಧಾರಾವಾಡ – ಜೂನ್ 24, 2018
6. **'ದಲಿತೋದಯ'** ತ್ರೈಮಾಸಿಕ ಪತ್ರಿಕೆ- ಮಾರ್ಚ್, 2009